ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 21-11-2016

# ಪತ್ರಿಕಾ ಪ್ರಕಟಣೆ

## ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡ ಸಿನಿಮಾ ಮಳಿಗೆ

ಬೆಂಗಳೂರು, ನ. 21 : (ಕರ್ನಾಟಕ ವಾರ್ತೆ)

ಗೋವಾದಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಎನ್‌ಎಫ್‌ಡಿಸಿ ತೆರೆದಿರುವ ವಿಶೇಷ ಫಿಲಂ ಬಜಾರ್‌ನಲ್ಲಿ ಕನ್ನಡ ಚಲನಚಿತ್ರ ಪರವಾಗಿ ಕನ್ನಡ ಚಲನಚಿತ್ರ ಅಕಾಡೆಮಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ವಿಶೇಷ ಮಳಿಗೆಯೊಂದನ್ನು ಸ್ಥಾಪಿಸಿದೆ.

ಪ್ರಥಮ ಬಾರಿಗೆ ತೆರೆಯಲಾಗಿರುವ ಈ ಮಳಿಗೆಯಲ್ಲಿ ಕನ್ನಡ ಚಲನಚಿತ್ರಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಕನ್ನಡ ಚಲನಚಿತ್ರರಂಗವನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಹಾಗೂ ಅಕಾಡೆಮಿ ಕಾರ್ಯಕ್ರಮಗಳ ಕಿರು ಹೊತ್ತಿಗೆಯನ್ನು ವಿತರಿಸಲಾಗುತ್ತಿದೆ.

ಕನ್ನಡದ ಪ್ರಸಿದ್ದ ಯುವ ನಿರ್ದೇಶಕರುಗಳಾದ ಪವನ್‌ಕುಮಾರ್ ಹಾಗೂ ತಿಥಿ ಖ್ಯಾತಿಯ ರಾಮರೆಡ್ಡಿ ಅವರು ಮಳಿಗೆಗೆ ಭೇಟಿ ನೀಡಿದರು. ಕೇಂದ್ರ ಸಚಿವ ವೆಂಕಯ್ಯನಾಯ್ಡು ಮಳಿಗೆಗೆ ಭೇಟಿ ನೀಡಿ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಹಾಗೂ ವಾರ್ತಾ ಇಲಾಖೆಯ ಚಲನಚಿತ್ರ ವಿಭಾಗದ ಜಂಟಿ ನಿರ್ದೇಶಕ ಎ.ಆರ್. ಪ್ರಕಾಶ್ ಅವರು ಉಪಸ್ಥಿತರಿದ್ದರು.

ಸನ್ಮಾನ:

ಗೋವಾದಲ್ಲಿ ಆರಂಭಗೊಂಡ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪನೋರಮಾ ವಿಭಾಗದ ಉದ್ಘಾಟನಾ ಸಮಾರಂಭದಲ್ಲಿ ಆಯ್ಕೆ ಸಮಿತಿಯ ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು ಹಾಗೂ ಸಮಿತಿಯ ಸದಸ್ಯ ಡಾ: ಕೆ. ಪುಟ್ಟಸ್ವಾಮಿ ಅವರನ್ನು ಕೇಂದ್ರ ಸಚಿವ ವೆಂಕಯ್ಯನಾಯ್ಡು ಅಭಿನಂದಿಸಿದರು.

# ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ನ. 21 : (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗ ಸಾರಿಗೆ ಇಲಾಖೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ 09 + 02 (ಹೈದ್ರಾಬಾದ್ ಕರ್ನಾಟಕ) ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ 19–11–2016 ರಂದು ಆಯೋಗದ ಅಂತರ್ಜಾಲ "http://kpsc.kar.nic.in/Selection List" ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು ನವೆಂಬರ್ 26 ರೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 500 001 ಇವರಿಗೆ ಸಲ್ಲಿಸಬಹುದಾಗಿದ್ದು, ನಿಗದಿತ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಜೆಡಿ:ಪಿಆರ್.

# ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಬೆಂಗಳೂರು, ನ. 21 : (ಕರ್ನಾಟಕ ವಾರ್ತೆ)

ಕಂದಾಯ ಇಲಾಖೆಯ ಯೋಜನಾ ಅನುಷ್ಠಾನ ಘಟಕದ ವಿಶ್ವಬ್ಯಾಂಕ್ ನೆರವಿನ ಎನ್‌ಸಿಆರ್‌ಎಂಪಿ ಯೋಜನೆಯಡಿ "ಸಂಗ್ರಹಣಾ ತಜ್ಞರ" ಒಂದು ಹುದ್ದೆಯನ್ನು ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅಂಗೀಕೃತ ವಿಶ್ವವಿದ್ಯಾಲಯದಿಂದ ಸಿವಿಲ್ ಇಂಜಿನಿಯರಿಂಗ್ ವಿಷಯದಲ್ಲಿ ಪದವಿ/ಸ್ನಾತಕೋತ್ತರ ಪದವಿ, ವಿಶ್ವಬ್ಯಾಂಕ್ ಅಥವಾ ಇನ್ನಿತರ ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಅಥವಾ ರಾಜ್ಯ/ಕೇಂದ್ರ ಸರ್ಕಾರದಲ್ಲಿ/ಅಧೀನ ಸಂಸ್ಥೆಗಳಲ್ಲಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಕನಿಷ್ಟ 2 ರಿಂದ 3 ವರ್ಷಗಳ ಸೇವಾನುಭವ ಹೊಂದಿರಬೇಕು. ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನೈಪುಣ್ಯತೆ, ಕಂಪ್ಯೂಟರ್ ಜ್ಞಾನ ಹಾಗೂ ವಿಪತ್ತು ನಿರ್ವಹಣೆ ಅಧಿನಿಯಮ 2005 ರ ಪೂರ್ಣ ಅನುಭವ ಹೊಂದಿದವರಿಗೆ ಆದ್ಯತೆ.

ಆಸಕ್ತ ಅಭ್ಯರ್ಥಿಗಳು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಹಾಗೂ ರಾಜ್ಯ ಯೋಜನಾ ಅನುಷ್ಠಾನ ಘಟಕ (ಎನ್‌ಸಿಆರ್‌ಎಂಪಿ) ಕೊಠಡಿ ಸಂಖ್ಯೆ 627, 6ನೇಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560 001 ಇಲ್ಲಿಗೆ ನವೆಂಬರ್ 30 ರೊಳಗಾಗಿ ನೋಂದಾಯಿತ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದು. ಮಾಸಿಕ ರೂ 40,000/– ಸಂಚಿತ ವೇತನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ವಿವರಗಳಿಗೆ ದೂರವಾಣಿ ಸಂಖ್ಯೆ 080–22032582/22340676 ಅಥವಾ ಇ–ಮೇಲ್ pdncrmpkar@gmail.com ಗೆ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದ

ಜೆಡಿ:ಪಿಆರ್.

# ರಫ್ತುದಾರರನ್ನು ಸಜ್ಜುಗೊಳಿಸುವ ಸಲುವಾಗಿ ಎಕ್ಸಿಮ್ ನಿರ್ವಹಣೆಯ ಮೇಲೆ ಅಲ್ಪಾವಧಿ ಯೋಗ್ಯತಾ ಪತ್ರ ತರಬೇತಿ

ಬೆಂಗಳೂರು, ನ. 21 : (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಭಾರತೀಯ ವಿದೇಶಿ ವ್ಯಾಪಾರ ಸಂಸ್ಥೆ (ಐಐಎಸ್‌ಟಿ)_ ನವದೆಹಲಿ ಇವರ ಸಹಯೋಗದಲ್ಲಿ ಎಕ್ಸಿಮ್ ಮಾರುಕಟ್ಟೆಗಳನ್ನು ಎದುರಿಸಲು ರಫ್ತುದಾರರನ್ನು ಸಜ್ಜುಗೊಳಿಸುವ ಸಲುವಾಗಿ ಎಕ್ಸಿಮ್ ನಿರ್ವಹಣೆಯ ಮೇಲೆ ಅಲ್ಪಾವಧಿ ಯೋಗ್ಯತಾ ಕೋರ್ಸುಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ಈ ಕೋರ್ಸ್‌ಗೆ ಆಯ್ಕೆಯಾದ ಕರ್ನಾಟಕ ಅಭ್ಯರ್ಥಿಗಳಿಗೆ ಕೋರ್ಸ್ ಶುಲ್ಕದಲ್ಲಿ ಶೇಕಡಾ 50 ಮತ್ತು ಗರಿಷ್ಠ ರೂ 25,000/–ಮೀರದಂತೆ ಮರುಪಾವತಿ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥವಾ ಡಿಪ್ಲೊಮಾ ಹಾಗೂ ಎರಡು ವರ್ಷಗಳ ಕಾರ್ಯಾನುಭವ ಇರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.vtpckarnataka.gov.in ಗೆ ಭೇಟಿನೀಡಬಹುದಾಗಿದೆ ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 25–11–2016.

**ಕೋರ್ಸ್ ಏಕೆ ಬೇಕು:**

* ಅಂತರರಾಷ್ಟ್ರೀಯ ವ್ಯಾಪಾರ ಕಾರ್ಯಾಚರಣೆಗಳು, ನಿಯಂತ್ರಣ ಮಾರ್ಗಸೂಚಿಗಳು, ದಾಖಲಾತಿಗಳು, ಬಂದರು ಕ್ರಮಗಳು, ಪ್ಯಾಕೇಜಿಂಗ್, ಭದ್ರತೆ, ವೆಚ್ಚ. ಇತ್ಯಾದಿಗಳಲ್ಲಿ ಸಮಗ್ರ ಜ್ಞಾನ ಮತ್ತು ನೈಪುಣ್ಯತೆ ಹಾಗೂ ಕೌಶಲ್ಯಗಳನ್ನು ಗಳಿಸಲು.

* ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ವಿಶ್ವಾಸ ಮತ್ತು ಸ್ಪರ್ಧಾತ್ಮಕತೆಯನ್ನು ನಿರ್ಮಿಸಲು.

* ಭಾರತದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆ ನಿರ್ವಹಣೆ ವಿದೇಶಾಂಗ ವ್ಯಾಪಾರ ನೀತಿ, ಅಂತರರಾಷ್ಟ್ರೀಯ ವ್ಯಾಪಾರ ಕಲೆ ಮತ್ತು ಕಾರ್ಯ ನಿರ್ವಹಣೆ, ವ್ಯಾಪಾರ ದಾಖಾಲಾತಿ/ದಾಖಲೀಕರಣ, ಸುಂಕ ನಿಯಂತ್ರಣ ಹಾಘೂ ಎಕ್ಸಿಮ್ ಪ್ರಕ್ರಿಯೆಗಳ ಕಾರ್ಯವಿಧಾನಗಳು.

**ಕೋರ್ಸ್‌ನ ವೈಶಿಷ್ಟ್ಯತೆಗಳು:**

*** ಆಯ್ಕೆ ವಿಧಾನ : ಅಭ್ಯರ್ಥಿಗಳನ್ನು ತಮ್ಮ ಸ್ವವಿವರ/ವಿದ್ಯಾರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡುವುದು. ಅಗತ್ಯವಿದ್ದಲ್ಲಿ ಆನ್‌ಲೈನ್ ಸಂದರ್ಶನ ನಡೆಸಲಾಗುವುದು.**

*** ಕೋರ್ಸ್ ಶುಲ್ಕ ರೂ 75,000/- ಪ.ಜಾ./ಪ.ಪ/ವಿಕಲಚೇತನ ಅಭ್ಯರ್ಥಿಗಳಿಗೆ ಶೇ 50 ರಷ್ಟು ರಿಯಾಯಿತಿ.**

**ಅವಧಿ: 4 ತಿಂಗಳು**

*** ವೇಳಾಪಟ್ಟಿ: ಸದರಿಕೋರ್ಸ್ ಐಐಎಫ್‌ಟಿ ನವದೆಹಲಿಯಲ್ಲಿ 4 ದಿನಗಳ ಕಾಂಟ್ಯಾಕ್ಟ್ ಸೆಷನ್ಸ್‌ನೊಂದಿಗೆ ಕೋರ್ಸ್ ಆರಂಭವಾಗಲಿದೆ. (ಕಾಂಟ್ಯಾಕ್ ಕ್ಲಾಸ್‌ಗಳ ಹಾಜರಾತಿ ಕಡ್ಡಾಯವಲ್ಲ) ಉಳಿದ ಎಲ್ಲಾ ಸೆಷನ್‌ಗಳನ್ನು ಮತ್ತು ಅಂತಿಮ ಪರೀಕ್ಷೆಯನ್ನು ಆನ್‌ಲೈನ್‌ನಲ್ಲಿ ನಡೆಸಲಾಗುವುದು.**

*** ಕೋರ್ಸ್ ಯು.ಎಸ್.ಪಿ: ಎಲ್ಲಾ ತರಗತಿಗಳು ನೇರ ಪ್ರಸಾರವಾಗುತ್ತವೆ ಮತ್ತು ಎರಡೂ ಕಡೆಯ ಸಂವಹನಕ್ಕೆ ಸಹಕಾರಿಯಾಗುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ.**

*** ಪರೀಕ್ಷೆ ಮತ್ತು ಪ್ರಮಾಣ ಪತ್ರ ವಿತರಣೆ: ಪ್ರಮಾಣ ಪತ್ರ ನೀಡಲು ಎಲ್ಲಾ ವಿಷಯಗಳಲ್ಲೂ ಕನಿಷ್ಠ ಶೇ. 50 ರಷ್ಟು ಅಂಕಗಳಿಸುವುದು ಕಡ್ಡಾಯ.**

ಜೆಡಿ:ಪಿಆರ್.